ಕೇಂದ್ರ ಸರ್ಕಾರ ಒಪ್ಪಿಕೊಂಡಿದೆ. ಆದರೆ ಈ ವಿಷಯವನ್ನು ಯೋಜನಾ ಆಯೋಗ ೧೯೮೯-೯೦ರ ವಾರ್ಷಿಕ ಯೋಜನೆ ಅಂತಿಮಗೊಳಿಸುವಾಗ ಗಮನದಲ್ಲಿಟ್ಟುಕೊಳ್ಳಬೇಕೆಂಬ ಶಕ್ತಿನ ಮೇಲೆ ಒಪ್ಪಿದೆ. ವರ್ಗಾವಣೆ ಆಗಬೇಕಾದ ಹಣದ ವಿಷಯ ಹೊರತುಪಡಿಸಿ ಆಯೋಗದ ಇತರ ಶಿಫಾರಸ್ಸುಗಳು ಭಾರತ ಸರ್ಕಾರದ ಪರಿಶೀಲನೆಯಲ್ಲಿವೆ.

ಸರ್ಕಾರದ ಎಲ್ಲಾ ಇಲಾಖೆಗಳಲ್ಲಿರುವ ಖಾಲಿ ಸ್ಥಾನಗಳ ಬಗ್ಗೆ

೨೮೫೭ ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—

ಅ) ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿಯಿರುವ ಒಟ್ಟು ಹುದ್ದೆಗಳ ಸಂಖ್ಯೆ ಎಷ್ಟು

ಆ) ರಾಜ್ಯದಲ್ಲಿರುವ ಸ್ಟೈಪೆಂಡರಿ ಪದವೀಧರರ ಸಂಖ್ಯೆ ಎಷ್ಟು? ಮತ್ತು ಅವರನ್ನು ಸಂಪೂರ್ಣವಾಗಿ ಯಾವಾಗ ವಿಲೀನಗೊಳಿಸಲಾಗುವುದು.

ಇ) ಎಲ್ಲ ಇಲಾಖೆಗಳಲ್ಲಿರುವ ಖಾಲಿ ಹುದ್ದೆಗಳನ್ನು ಸರ್ಕಾರವು ಯಾವಾಗ ಭರ್ತಿ ಮಾಡುವುದು?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಯವರು).—

ಅ) ಸರ್ಕಾರದ ವಿವಿಧ ಇಲಾಖೆಗಳಲ್ಲಿ ೧-೨-೮೮ರಲ್ಲಿ ಇದ್ದ ಖಾಲಿ ಹುದ್ದೆಗಳ ಸಂಖ್ಯೆ ೪೭,೦೧೪

ಆ) ರಾಜ್ಯದಲ್ಲಿ ೩೧-೮-೮೮ರಲ್ಲಿ ಇದ್ದ ಸ್ಟೈಪೆಂಡರಿ ಪದವೀಧರರ ಸಂಖ್ಯೆ ೭,೪೬೩. ಈ ಸ್ಟೈಪೆಂಡರಿ ಅಭ್ಯರ್ಥಿಗಳನ್ನು ವಿಲೀನಗೊಳಿಸುವ ಬಗ್ಗೆ ಕಾಲಮಿತಿಯನ್ನು ನಿಗಧಿಪಡಿಸುವುದು ಸಾಧ್ಯವಿಲ್ಲ.

ಇ) ಹುದ್ದೆಗಳನ್ನು ಭರ್ತಿ ಮಾಡುವುದು ಸತತವಾಗಿ ಮುಂದುವರೆಯುತ್ತಿರುವ ಒಂದು ವ್ಯವಸ್ಥೆ.

ಸಚಿವಾಲಯದಲ್ಲಿ ಕೆಲಸ ಮಾಡುತ್ತಿರುವ ಹರಿಜನ ಗಿರಿಜನ ವರ್ಗಕ್ಕೆ ಸೇರಿದ ಐ.ಎ.ಎಸ್. ಕೆ.ಎ.ಎಸ್. ಅಧಿಕಾರಿಗಳ ಬಗ್ಗೆ

೩೦೦೪ ಶ್ರೀ ಪಿ.ಸಿ. ಮುನಿಸ್ವಾಮಯ್ಯ (ದೇವನಹಳ್ಳಿ) —ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಎಷ್ಟು ಜನ ಐ.ಎ.ಎಸ್. ಅಧಿಕಾರಿಗಳು ಕರ್ನಾಟಕ ಸರ್ಕಾರದ ಸಚಿವಾಲಯದಲ್ಲಿ ಕೆಲಸ ಮಾಡುತ್ತಿರುವವರು?

ಆ) ಅವರುಗಳಲ್ಲಿ ಎಷ್ಟು ಅಧಿಕಾರಿಗಳು ಹರಿಜನ/ಗಿರಿಜನ ವರ್ಗಕ್ಕೆ ಸೇರಿದವರು?

ಶ್ರೀ ಎಸ್. ಆರ್. ಬೊಮ್ಮಾಯಿ. (ಮುಖ್ಯ ಮಂತ್ರಿಗಳು).—

ಅ) ಐ.ಎ.ಎಸ್. ಅಧಿಕಾರಿಗಳು ೪೧
ಕೆ. ಎ ಎಸ್. ಅಧಿಕಾರಿಗಳು ೨೮

ಆ) ಹರಿಜನ/ಗಿರಿಜನ ವರ್ಗಕ್ಕೆ ಸೇರಿದ ಅಧಿಕಾರಿಗಳು

	ಹರಿಜನ ವರ್ಗಕ್ಕೆ	ಗಿರಿಜನ ವರ್ಗಕ್ಕೆ ಸೇರಿದವರು
ಐ.ಎ.ಎಸ್ ಅಧಿಕಾರಿಗಳು	೪	...
ಕೆ.ಎ ಎಸ್. ಅಧಿಕಾರಿಗಳು	೪	...